# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧೯

## ಶ್ರೀಮಾತೆ : ನಾನಾ ಭಾವಗಳಲ್ಲಿ



॥ ೧ ॥

**ಸು**ಪ್ರಸಿದ್ಧ ನಟಿಯರಾದ ತಿನ್‌ಕರಿ ಹಾಗೂ ತಾರಾ ಸುಂದರಿ ಇಬ್ಬರೂ ಕೆಲವೊಮ್ಮೆ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಬರುತ್ತಿದ್ದರು. ಎಂದಿಗೂ ಅವರು ದೇವಾಲಯವನ್ನು ಪ್ರವೇಶಿಸುತ್ತಿರಲಿಲ್ಲ , ಅಥವಾ ಶ್ರೀಮಾತೆಯವರ ಪಾದಸ್ಪರ್ಶ ಮಾಡಿ ಪ್ರಣಾಮ ಮಾಡುತ್ತಿರಲಿಲ್ಲ. ದೇವಾಲಯದ ಹೊರಗಿನಿಂದಲೇ ಕೊರಳಲ್ಲಿ ವಸ್ತ್ರವನ್ನು ಸುತ್ತಿ ಠಾಕೂರರಿಗೆ ಹಾಗೂ ಶ್ರೀಮಾತೆಗೆ ಪ್ರಣಾಮ ಮಾಡುತ್ತಿದ್ದರು. ಶ್ರೀಮಾತೆ ಕೂಡ ಅವರಿಗೆ ಪ್ರಸಾದ ಸ್ವೀಕರಿಸಲು ಹೇಳುತ್ತಿದ್ದರು. ಊಟವಾದ ನಂತರ ಶ್ರೀಮಾತೆ ತಮ್ಮ ಕೈಯಿಂದಲೇ ಅವರಿಗೆ ತಾಂಬೂಲ ನೀಡುತ್ತಿದ್ದರು. ಅದನ್ನು ಅವರು ಬಾಯಿಗೆ ಸ್ಪರ್ಶಿಸದೆ ತಿನ್ನುತ್ತಿದ್ದರು. ಇದನ್ನೆಲ್ಲ ನೋಡಿ ಶ್ರೀಮಾತೆ ಒಂದು ದಿನ, ಅವರು ಹೊರಟು ಹೋದ ಮೇಲೆ, ''ಇವರದೇ ನಿಜವಾದ ಭಕ್ತಿ. ಭಗವಂತನನ್ನು ಎಷ್ಟು ಪ್ರಾರ್ಥಿಸುತ್ತಾರೋ ಅದನ್ನು ಒಂದೇ ಮನಸ್ಸಿನಿಂದ ಮಾಡುತ್ತಾರೆ. ಆಹಾ!'' ಎಂದರು.

॥ ೨ ॥

**ಠಾ**ಕೂರರ ಹಳೆಯ ಗೃಹೀ ಭಕ್ತರೊಬ್ಬರು ಒಮ್ಮೆ ಶ್ರೀಮಾತೆಯವರ ಬಳಿಗೆ ಬಂದು, ಒಬ್ಬ ಆತ್ಮೀಯನಾಗಿದ್ದ ಯುವಕನೊಬ್ಬನ ಚಾರಿತ್ರ್ಯ ಕೆಟ್ಟುಹೋಗಿರುವ ವಿಷಯವನ್ನು ಕುರಿತು ದೂರಿದರು. ಅವನನ್ನು ಅವರು ತಮ್ಮ ಬಳಿಗೆ ಬರಗೊಡಬಾರದೆಂದೂ ಹೇಳಿದರು. ಆ ಯುವಕ ಶ್ರೀಮಾತೆಯವರ ಶಿಷ್ಯನಾಗಿದ್ದ. ದೂರನ್ನು ಕೇಳಿದ ಶ್ರೀಮಾತೆ, ''ನನ್ನ ಬಳಿಗೆ ಬಾರದೆ ಹೋದರೆ, ಇನ್ನಾರ ಬಳಿಗೆ ಅವನು ಹೋಗುತ್ತಾನೆ? ನಾನು ಕೇವಲ ಒಳ್ಳೆಯವರ ತಾಯಿ ಮಾತ್ರವೆ? ಕೆಟ್ಟವರ ತಾಯಿಯೂ ಅಲ್ಲವೆ?'' ಎಂದರು.

॥ ೩ ॥

**ಒ**ಬ್ಬಾಕೆ ಕೆಟ್ಟ ಚಾರಿತ್ರ್ಯವುಳ್ಳ ಹೆಂಗಸು ಶ್ರೀಮಾತೆಯವರ ಬಳಿಗೆ ಆಗಾಗ ಹೋಗುತ್ತಿದ್ದಳು. ಅದನ್ನು ನೋಡಿ ಹಲವು ಮಂದಿ ಭಕ್ತರು ಹಾಗೂ ಭಕ್ತೆಯರು ಅಸಮಾಧಾನಗೊಂಡರು. ಅಷ್ಟೇಕೆ, ಒಂದು ದಿನ ಶ್ರೀರಾಮಕೃಷ್ಣರ ಹಳೆಯ ಭಕ್ತನೊಬ್ಬನ ಪತ್ನಿ[೧] ಕೂಡ ಶ್ರೀಮಾತೆಯವರಿಗೆ ಈ ವಿಷಯವಾಗಿ ದೂರಿದಳು. ಆದರೆ ಶ್ರೀಮಾತೆ ಹಿಂದೆ ಹೇಳಿದಂತೆ, ಅದೇ ಭಾವದಲ್ಲಿ ಉತ್ತರವಿತ್ತರು: ''ನಾನು ಕೇವಲ ಒಳ್ಳೆಯವರ ತಾಯಿಯೆ? ಕೆಟ್ಟವರ ತಾಯಿಯಲ್ಲವೆ?'' ಆ ಹೆಂಗಸು ಶ್ರೀಮಾತೆಯವರ ಶಿಷ್ಯೆಯಾಗಿರಲಿಲ್ಲ, 'ಗೋಪಾಲೇರ್ ಮಾ'ರ ಶಿಷ್ಯೆಯಾಗಿದ್ದಳು.

॥ ೪ ॥

**ಶ್ರೀ**ಮಾತೆ ಹಾಸ್ಯ, ಯುಕ್ತಿಗಳಲ್ಲಿ ವಿಶೇಷ ಪರಿಣತರಾಗಿದ್ದರು. ಎರಡು ಕಥೆಗಳನ್ನು ಅವಲಂಬಿಸಿ, ಒಂದೇ ಸಮಯದಲ್ಲಿ ಹೇಗೆ ಕಣ್ಣಿಗೆ ಕಟ್ಟುವಂತೆ, ಕೈ, ತಲೆ ಎಲ್ಲವನ್ನೂ ಅಲ್ಲಾಡಿಸಿ

೧ ಬಲರಾಮ ಬಸುವಿನ ಪತ್ನಿ, ಕೃಷ್ಣಭಾವಿನೀ ಬಸು. *(-ಸಂ)*

ವರ್ಣಿಸುತ್ತಿದ್ದರೆಂದರೆ, ಅವರು ನಿಜವಾಗಿಯೂ ಅಭಿನಯಿಸುತ್ತಿದ್ದಾರೆಂದೇ ಅನ್ನಿಸುತ್ತಿತ್ತು. ಆದರೆ ಹೀಗೆ ಮಾಡುತ್ತ ಇದ್ದಕ್ಕಿದ್ದಂತೆ ಗಂಭೀರ ಭಾವ ತಾಳಿ ಹೇಳುತ್ತಿದ್ದರು: ''ನನ್ನ ಶಿಷ್ಯರು ಎಂದಿಗೂ ಹೀಗಾಗಬಾರದು. ನೇಡ ನೇಡಿಯರ ಗುಂಪನ್ನು ರಚಿಸಲು ಹೋಗಿ ಮದುವೆ ಮಾಡಿಕೊಂಡುಬಿಟ್ಟರು. ನನ್ನ ಅನುಮತಿಯೇನೋ ಇತ್ತು.'' ಈ ಇಬ್ಬರ ನಡುವೆ ಒಬ್ಬ ಯಾವಾಗಲೋ ಒಮ್ಮೆ ಶ್ರೀಮಾತೆಗೆ ಪ್ರಣಾಮ ಮಾಡಲು ಬರುತ್ತಿದ್ದ. ಶ್ರೀಮಾತೆ ಕೆಲವೇ ಮಂದಿ ಅಂತರಂಗದ ಶಿಷ್ಯರನ್ನು ಬಿಟ್ಟರೆ ಉಳಿದವರ ಮುಂದೆ, ತಮ್ಮ ಸಂಪೂರ್ಣ ದೇಹವನ್ನು ಉತ್ತರೀಯದಿಂದ ಆವರಿಸಿಕೊಂಡು ನಿಂತು ಅವರ ಪ್ರಣಾಮವನ್ನು ಸ್ವೀಕರಿಸುತ್ತಿದ್ದರು. ಇಲ್ಲೂ ಅವರು ಹಾಗೆಯೇ ಮಾಡಿದರು. ಆ ವ್ಯಕ್ತಿ ಪ್ರಣಾಮ ಮಾಡಿ ಹೊರಟು ಹೋದ ಮೇಲೆ ನಾವು ಅನೇಕ ಸಲ ಗಮನಿಸಿದ್ದೆವು, ಶ್ರೀಮಾತೆ ತಮ್ಮ ಉತ್ತರೀಯ ಹಾಗೂ ಬಟ್ಟೆಬರೆಯ ಮೇಲೆ ಗಂಗಾಜಲ ಸಿಂಪಡಿಸುತ್ತಿದ್ದರು, ಅನಂತರ ತಮ್ಮ ಪಾದಗಳನ್ನು ಗಂಗಾಜಲದಲ್ಲಿ ತೊಳೆಯುತ್ತಿದ್ದರು.

॥ ೫ ॥

**ಒ**ಬ್ಬಾಕೆ ಮಧ್ಯವಯಸ್ಕಳಾದ ವಿಧವೆ ಶ್ರೀಮಾತೆಯವರ ಬಳಿಗೆ ಪ್ರತಿದಿನವೂ ಬರುತ್ತಿದ್ದಳು. ಅವಳನ್ನು ಕುರಿತು ಶ್ರೀಮಾತೆ ಹೇಳುತ್ತಿದ್ದರು: ''ಅವಳೊಬ್ಬಳು ಪ್ರತ್ಯೇಕವಾಗಿರುವ ವ್ಯಕ್ತಿ. ಒಬ್ಬ ನಲ್ಲ ಒಬ್ಬ ಗಂಡಸನ್ನು ಆಶ್ರಯಿಸಿಕೊಂಡೇ ಇರಬಯಸುತ್ತಾಳೆ. ಬಹುಶಃ ಕಾಮಾಖ್ಯಕ್ಕೆ ಹೋಗಿ ಕೌಲ ಮತದವರನ್ನು ಮದುವೆ ಮಾಡಿಕೊಂಡು ಬಂದಿರಬೇಕು.''

॥ ೬ ॥

**ಸ**ಣ್ಣ ವಯಸ್ಸಿನ ಒಬ್ಬಾಕೆ ವಿಧವೆ ಶ್ರೀಮಾತೆಯವರ ಬಳಿಗೆ ಬರುತ್ತಿದ್ದಳು. ಕೆಲವೊಮ್ಮೆ ಅವಳು ಮೂರು ನಾಲ್ಕು ದಿನ ಅವರೊಂದಿಗೆ ಇದ್ದು ಹೋಗುತ್ತಿದ್ದಳು. ಹಾಗೆ ಅವಳು ಅಲ್ಲಿದ್ದಾಗ ಶ್ರೀಮಾತೆ ಯಾವಾಗಲೂ ತುಂಬಾ ತೊಂದರೆಗೊಳಗಾಗುತ್ತಿದ್ದರು. ಆಕೆ ಶ್ರೀಮಾತೆಯವರ ಶಿಷ್ಯೆ. ಶ್ರೀಮಾತೆ ಆಕೆಗೆ ತುಂಬಾ ಉಪದೇಶ ನೀಡುತ್ತಿದ್ದರು. ಅವರು ಹೇಳುತ್ತಿದ್ದರು, ''ನೋಡಮ್ಮಾ, ನನ್ನ ಹೆಸರನ್ನು ಮುಳುಗಿಸಬೇಡ. ಶಿಷ್ಯರು ಮಾಡಿದ ಪಾಪ ಗುರುವನ್ನು ತಗಲುತ್ತದೆ. ತುಂಬ ಎಚ್ಚರಿಕೆಯಿಂದಿರು. ಪುರುಷರು ಯಾರೇ ಆಗಿರಲಿ, ಯಾರನ್ನೂ ನಂಬಬೇಡ. ಪುರುಷರ ಕಡೆಗೆ ಒಂದು ಸಲವೂ ನೋಡಬೇಡ. ನಿನ್ನ ಧ್ಯಾನ-ಜಪಗಳಲ್ಲೇ ದಿನವನ್ನೆಲ್ಲ ಕಳೆ.''

॥ ೭ ॥

**ರಾ**ಖಾಲ್ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಅಥವಾ ಬಾಬುರಾಮ್ ಮಹಾರಾಜ್ (ಸ್ವಾಮಿ ಪ್ರೇಮಾನಂದರು) ಪ್ರಣಾಮ ಮಾಡಿದಾಗ ಶ್ರೀಮಾತೆ ಉತ್ತರೀಯದಿಂದ ಬಲಗೈಯನ್ನು ಹೊರಚಾಚಿ ಆಶೀರ್ವಾದ ಮಾಡುತ್ತಿದ್ದರು. ಸ್ವಾಮೀಜಿ, ನಾಗಮಹಾಶಯ, ಗಿರೀಶಬಾಬು ಅಥವಾ ಮಾಸ್ಟರ್ ಮಹಾಶಯ ಇವರು ಪ್ರಣಾಮ ಮಾಡಿದರೆ, ಉತ್ತರೀಯದ ಒಳಗಿನಿಂದ ಶ್ರೀಮಾತೆ ಪ್ರತಿನಮಸ್ಕಾರ ಮಾಡುತ್ತಿದ್ದರು. ಶ್ರೀಮಾತೆ ನಾಗಮಹಾಶಯರೊಂದಿಗೆ ಮಾತುಕತೆ ಆಡುತ್ತಿದ್ದರು.

॥ ೮ ॥

**ಶ್ರೀ**ಮಾತೆ ತನ್ನ ಶಿಷ್ಯಂದಿರಲ್ಲಿ ಕೆಲವರ ಹಣೆಯ ಮೇಲೆ ಕೈಯಿಟ್ಟು ಆಶೀರ್ವಾದ ಮಾಡುತ್ತಿದ್ದರು, ಕೆಲವರ ಕೆನ್ನೆಯ ಮೇಲೆ ಕೈಯಿಟ್ಟು ಚುಂಬಿಸುತ್ತಿದ್ದರು. ಬೆರಳೆಣಿಕೆಯಷ್ಟು ಅಂತರಂಗ ಶಿಷ್ಯಂದಿರ ಎದೆಯ ಮೇಲೆ ಹಾಗೂ ಹಣೆಯ ಮೇಲೆ ಜಪ ಮಾಡುತ್ತಿದ್ದರು. ಒಂದೆರಡು ಬಾರಿ ಹಿಂಭಾಗದಲ್ಲಿ ಕೈಯಾಡಿಸಿ ''ಕುಂಡಲಿನಿ, ಎದ್ದೇಳು'' ಎಂದು ಹೇಳಿ ಆಶೀರ್ವಾದ ಮಾಡಿದ್ದರು.

॥ ೯ ॥

**ಮೂ**ರು ಮಂದಿ ಶಿಷ್ಯಂದಿರಿಗೆ ದೀಕ್ಷೆ ನೀಡುವ ಅಧಿಕಾರ ನೀಡಿದ್ದರು ಎಂದು ನಮಗೆ ತಿಳಿದಿದೆ. ಮೊದಲನೆಯವರು ಕಾಳೀಕೃಷ್ಣ ಮಹಾರಾಜ್ (ಸ್ವಾಮಿ ವಿರಜಾನಂದ), ಎರಡನೆಯವರು ಸುಶೀಲ್ ಮಹಾರಾಜ್ (ಸ್ವಾಮಿ ಪ್ರಕಾಶಾನಂದ) ಹಾಗೂ ಮೂರನೆಯವರ ಹೆಸರನ್ನು ಪ್ರಕಟಗೊಳಿಸಲು ನಮ್ಮ ಮೇಲೆ ನಿಷೇಧವಿದೆ. ಮೊದಲನೆಯ ಇಬ್ಬರಿಗೂ ಒಂದೇ ಬಗೆಯ ಬೀಜಸಹಿತವಾದ ಮಂತ್ರ ಕೊಟ್ಟಿದ್ದರು. ಮೂರನೆಯವರಿಗೆ ಅದಕ್ಕಿಂತ ಬೇರೆಯದಾದ ಬೀಜಸಹಿತ ಮಂತ್ರವನ್ನು ಕೊಟ್ಟಿದ್ದರು. ಅದನ್ನು ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಕಲಿಸಿರಲಿಲ್ಲ.

॥ ೧೦ ॥

**ಶ್ರೀ**ರಾಮಕೃಷ್ಣರಿಗೆ ನಾಣ್ಯವನ್ನು ಸ್ಪರ್ಶಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದು ಕೇಳಿದ್ದೇವೆ. ಅವರಿಲ್ಲದಾಗ ಅವರ ಹಾಸಿಗೆಯ ಕೆಳಗೆ ನಾಣ್ಯವನ್ನು ಇಟ್ಟರೂ, ಆ ಹಾಸಿಗೆಯನ್ನು ಅವರಿಗೆ ಸ್ಪರ್ಶ ಮಾಡಲಾಗುತ್ತಿರಲಿಲ್ಲ. ಲೋಹವನ್ನು ಸ್ಪರ್ಶಿಸಹೊರಟರೆ ಅವರ ಕೈಯಲ್ಲಿ ಸಿಂಗಿ ಮೀನಿನ ಮುಳ್ಳನ್ನು ಮುರಿಯುವ ಹಾಗೆ, ಒಂದು ಬಗೆಯಲ್ಲಿ ನೋವನ್ನು ಅನಭವಿಸುತ್ತಿದ್ದರು. ಅವರ ಕೈ ಮುರುಟುತ್ತಿತ್ತು. ಶ್ರೀಮಾತೆಯವರನ್ನು ನಾವು ಬೇರೆ ರೀತಿಯಲ್ಲಿ ನೋಡಿದ್ದೇವೆ. ಅವರು ನಾಣ್ಯ ಅಥವಾ ಆಭರಣವನ್ನು ಕೈಗೆ ತೆಗೆದುಕೊಂಡಾಗಲೆಲ್ಲ ಅದನ್ನು ತನ್ನ ಹಣೆಗೆ ಮುಟ್ಟಿಸಿಕೊಳ್ಳುತ್ತಿದ್ದರು. ಅವುಗಳನ್ನು ಯಾರಿಗಾದರೂ ಕೊಡುವಾಗ, ಅಥವಾ ಯಾರಿಂದಲಾದರೂ ತೆಗೆದುಕೊಳ್ಳುವಾಗಲೂ ಅವರು ಹೀಗೆಯೇ ಮಾಡುತ್ತಿದ್ದರು. ಈ ಬಗೆಯಲ್ಲಿ ಅವರಿಗೂ ಠಾಕೂರರಿಗೂ ಇದ್ದ ವ್ಯತ್ಯಾಸವನ್ನು ಕುರಿತು ಶ್ರೀಮಾತೆಯವರನ್ನು ಕೇಳಿದಾಗ ಅವರು

ಹೀಗೆಂದರು: ''ಠಾಕೂರ್ ಮತ್ತು ನಾನು! ಮಗೂ, ನಾನಾದರೋ ಹೆಣ್ಣು ಹೆಂಗಸು — ಠಾಕೂರರು ನನಗೆ ಚಿನ್ನದ ಆಭರಣವನ್ನೇ ಕೊಟ್ಟು ಅಲಂಕರಿಸಿದ್ದರು!''

॥ ೧೧ ॥

**ನಾ**ನು ಬಹಳ ಚಹಾ ಕುಡಿಯುತ್ತಿದ್ದೆ. ಶ್ರೀಮಾತೆ ನನಗೆ ಉಪದೇಶ ಕೊಟ್ಟರು: ''ಠಾಕೂರರು ಹೇಳುತ್ತಿದ್ದರು, 'ದೇಹವನ್ನು ಸಮಶೀತಲದಲ್ಲಿ ಇಡಬೇಕು' ಅಂತ. ಬರೀ ಉಷ್ಣವಿರುವ ವಸ್ತುವನ್ನು ಕುಡಿಯಬೇಕೆ? ಕಲ್ಲುಸಕ್ಕರೆ ಪಾನೀಯ, ಎಳನೀರು — ಇವನ್ನೆಲ್ಲ ಕುಡಿಯಬೇಕು.''

॥ ೧೨ ॥

**ಬೇ**ಲೂರು ಮಠದಲ್ಲಿ ಚಂಡೀಪಾರಾಯಣ (ದುರ್ಗಾಸಪ್ತಶತೀ ಪಾರಾಯಣ) ನಡೆಯುತ್ತಿತ್ತು. ಆದರೆ ಪಾರಾಯಣ ಸರಿಯಾಗಿ ನಡೆಯುತ್ತಿರಲಿಲ್ಲವೆಂದು ಶ್ರೀಮಾತೆ ಅದನ್ನು ನಿಲ್ಲಿಸಿಬಿಟ್ಟರು. ಅನಂತರ ಹರಿ ಮಹಾರಾಜರ (ಸ್ವಾಮಿ ತುರೀಯಾನಂದರ) ಪಾರಾಯಣವನ್ನು ಕೇಳಿ, ತಮ್ಮ ಮೊದಲಿನ ಆದೇಶವನ್ನು ಹಿಂದೆಗೆದುಕೊಂಡು ಹೇಳಿದರು, ''ಹರಿ ಓದಬಲ್ಲ.''

॥ ೧೩ ॥

**ಠಾ**ಕೂರರು ಹೇಳುತ್ತಿದ್ದರೆಂದು ಕೇಳಿದ್ದೆ: ''ಬಂಗಾಳಿ ಭಾಷೆಯಲ್ಲಿ ಅಕ್ಷರಗಳು ಒಂದೇ; ಹೆಚ್ಚೆಂದರೆ ಎರಡು ಇರುತ್ತವೆ. ಆದರೆ 'ಶ' ಅಕ್ಷರ ಮೂರು ಇವೆ - ಶ, ಷ, ಸ — ಇದರ ಅರ್ಥ, 'ಸಹಿಸು, ಸಹಿಸು, ಸಹಿಸು' ಅಂತ!'' ಶ್ರೀಮಾತೆ ಇದರ ಅರ್ಥವನ್ನು ಬೇರೆ ಉಪಮೆಯೊಂದಿಗೆ ವಿವರಿಸಿದ್ದನ್ನು ಕೇಳಿದ್ದೇನೆ. ಅವರು ಹೇಳುತ್ತಿದ್ದರು: ''ಪೃಥಿವಿಯಂತೆ ಸಹನೆಯ ಗುಣವನ್ನು ಹೊಂದಿರಬೇಕು.'' ಅವರು ವಿಷಾದದಿಂದ ವಿವರಣೆ ನೀಡುತ್ತಿದ್ದರು: ''ಪೃಥಿವಿಯ ಮೇಲೆ ಎಷ್ಟೊಂದು ಗಂಡಾಂತರ, ಎಷ್ಟೊಂದು ತೊಂದರೆ ಎಲ್ಲ ನಡೆಯುತ್ತವೆ; ಆದರೆ ಭೂಮಿ ಎಲ್ಲವನ್ನೂ ಒಂದೇ ರೀತಿ ಸಹಿಸಿಕೊಂಡು ಹೋಗುತ್ತಾಳೆ. ಮನುಷ್ಯರಿಗೆ ಈ ರೀತಿ ಸಹಿಸುವ ಗುಣ ಇರಬೇಕು.''

॥ ೧೪ ॥

**ಶ್ರೀ**ಮಾತೆ ತಮ್ಮ ಒಬ್ಬ ಸೇವಕನಿಗೆ ಬಟ್ಟೆಬರೆಗಳನ್ನು ಕೊಡಬಯಸಿದರು. ಆತ ಅದನ್ನು ಸ್ವೀಕರಿಸದೆ ಹೇಳಿದ, ''ಅಮ್ಮಾ, ನನ್ನ ಬಳಿ ಇದೆ. ನೀವು ಕೊಡಬೇಡಿ.'' ಕೆಲವು ದಿನಗಳ ನಂತರ ಒಂದು ಸಲ ಶ್ರೀಮಾತೆ ಆ ಸೇವಕನಿಗೆ ಹೇಳಿದರು. ''ನೀನೇಕೆ ಅದನ್ನು ತೆಗೆದುಕೊಳ್ಳುತ್ತಿಲ್ಲ ಅಂತ ಹೇಳಬೇಕು. — ನಿಗೆ ನಾನು ಎಷ್ಟೋ ಬಟ್ಟೆಬರೆ ಕೊಟ್ಟಿದ್ದೇನೆ. ಅವನು ಎಂದಿಗೂ 'ಬೇಡ' ಅಂತ ಹೇಳಿಲ್ಲ. ನಿನಗೆ ಒಂದನ್ನೇ ಕೊಡಬೇಕೆಂದರೂ ನೀನು ತೆಗೆದುಕೊಳ್ಳುತ್ತಿಲ್ಲ , ಏಕೆ?'' ಅದಕ್ಕೆ ಸೇವಕ ಉತ್ತರಿಸಿದ: ''ಭಕ್ತರು ನಿಮಗೆ ಕೊಡುವಾಗ ನೀವೇ ಅದನ್ನು ಬಳಸಬೇಕೆಂದು ಕೊಡುತ್ತಾರೆ. ಅದನ್ನು ನಾನು ಸ್ವೀಕರಿಸಬಹುದೆ? ಆಮೇಲೆ, ಇಲ್ಲಿ ನಿಮಗೆ ಅವೆಲ್ಲ ಸಿಗುತ್ತದೆ, ಹಳ್ಳಿಯಲ್ಲಿ ಸಿಗಲಾರದು; ಅಲ್ಲಿಗೆ ಹೋದರೆ, ಅವರಿಗೆ ಇವರಿಗೆ ಹೇಳಿದರೆ ಮಾತ್ರ ಕೊಡುತ್ತಾರೆ. ಕೊನೆಗೆ ಪೆಟ್ಟಿಗೆಯಲ್ಲಿ ಒಂದು ವಸ್ತ್ರವೂ ಉಳಿದಿರುವುದಿಲ್ಲ, ನಾನು ನೋಡಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ತೆಗೆದುಕೊಳ್ಳಲಾರೆ.'' ಶ್ರೀಮಾತೆ ಕೇಳಿದರು: ''ನೀನು ನನ್ನನ್ನು ಏನೆಂದು ತಿಳಿದುಕೊಂಡಿದ್ದೀಯಾ?'' ಸೇವಕ ಉತ್ತರಿಸಿದ: ''ನನ್ನ ತಾಯಿ.'' ಶ್ರೀಮಾತೆ ಕೋಪಗೊಂಡು ಹೇಳಿದರು, ''ಪೆದ್ದು ಹುಡುಗ! ನಿನಗೆ ಸ್ವಲ್ಪವೂ ಬುದ್ಧಿ ಇಲ್ಲವಲ್ಲ — ತಾಯಿ ಎಂದಾದರೂ ಮಗನಿಗೆ ಕೊಡದೆ ತಾನೇ ಉಣ್ಣುವುದು, ಉಡುವುದು ಮಾಡಬಲ್ಲಳೆ? ಮಕ್ಕಳಿರುವಾಗ ತಾಯಿಯ ಭಂಡಾರ ಎಂದಾದರೂ ಖಾಲಿ ಉಳಿದೀತೆ? ಇವತ್ತು ನಾನು ಹೇಳುತ್ತಿದ್ದೇನೆ — ಯಾವಾಗ ಏನು ಬೇಕಾಗಿದೆಯೋ ನನ್ನ ಬಳಿ ಬಂದು ತೆಗೆದುಕೊಳ್ಳಬೇಕು. ಹಾಗಿದ್ದರೆ ಮಾತ್ರ ನನಗೆ ಆನಂದವಾಗುವುದು.'' ಹೀಗೆಂದ ಶ್ರೀಮಾತೆ, ಪೆಟ್ಟಿಗೆಯಿಂದ ಒಂದು ವಸ್ತ್ರವನ್ನು ತೆಗೆದು, ಅದನ್ನು ತಮ್ಮ ದೇಹಕ್ಕೆ ಸ್ಪರ್ಶಿಸಿ ಪ್ರಸಾದ ಮಾಡಿ, ಬಳಿಕ ಅದನ್ನು ಸೇವಕನಿಗೆ ಕೊಟ್ಟರು. ಇನ್ನೊಂದು ಬೆಲೆ ಬಾಳುವ ಬಟ್ಟೆಯನ್ನು — ಅದನ್ನು ಪ್ರಸಿದ್ಧ ಬ್ಯಾರಿಸ್ಟರ್ ಎಸ್.ಎನ್ ಬ್ಯಾನರ್ಜಿಯವರ ತಾಯಿ ಕೊಟ್ಟಿದ್ದಳು — ಅದನ್ನು ತನ್ನ ಮೈಗೆ ತಗುಲಿಸಿ, ಪ್ರಸಾದವಾಗಿಸಿ ಆತನಿಗೆ ಕೊಟ್ಟರು. ಸೇವಕ ಎರಡನ್ನೂ ತಲೆಗೆ ಸುತ್ತಿ ತೆಗೆದುಕೊಂಡು ಬರುತ್ತಿದ್ದ. ಅವನನ್ನು ಕರೆದು, ಶ್ರೀಮಾತೆ ಅಲ್ಲಿಯ ತನಕ ತಮ್ಮ ಬಳಿಯೇ ರಕ್ಷಿಸಿ ಕೊಂಡಿದ್ದ, ಠಾಕೂರರಿಗೆ ಹೊದೆಸುತ್ತಿದ್ದ ಒಂದು ಬಟ್ಟೆಯನ್ನು ಕೊಟ್ಟರು. ಸೇವಕ ತನ್ನ ಭಾವನೆಗೆ ವಿರುದ್ಧವಾದ ರೀತಿಯಲ್ಲಿ ಆದುದಕ್ಕೋ, ಅಥವಾ ಶ್ರೀಮಾತೆಯವರ ಅಪಾರ ಪ್ರೀತಿಯ ರಾಶಿಯಿಂದಾಗಿ ಮುಗ್ಧವಾಗಿಯೇ ಅಳುವುದಕ್ಕೆ ಆರಂಭಿಸಿದ. ಶ್ರೀಮಾತೆ ಅವನ ಕೆನ್ನೆ ಹಿಡಿದು ಚುಂಬಿಸಿ ಹೇಳಿದರು, ''ತಾಯಿಯ ಮೇಲೆ ಕೂಡಾ ಮಕ್ಕಳಿಗೆ ಅಧಿಕಾರವಿದೆ, ಮಗೂ. ಏನು ನಿನಗೆ ಬೇಕಾಗಿದೆಯೋ, ಅದನ್ನು ನೋಡಿ ತೆಗೆದುಕೋ'' ಎಂದರು. ಸೇವಕನು ಕೆಳ ಅಂತಸ್ತಿಗೆ ಬಂದು, ಠಾಕೂರರಿಗೆ ಹೊದೆಸಿದ ಬಟ್ಟೆಯ ಪವಿತ್ರತೆಯನ್ನು ಕಾಪಾಡಲು ತನ್ನಿಂದ ಸಾಧ್ಯವೇ ಇಲ್ಲವೇ ಎಂದು ಯೋಚಿಸಿ, ಅದನ್ನು ಶರತ್ ಮಹಾರಾಜರ ಬಳಿ ಒತ್ತೆಯಾಗಿಟ್ಟ. ಇನ್ನುಳಿದ ಎರಡು ಬಟ್ಟೆಗಳನ್ನು ತಾನೇ ತೆಗೆದುಕೊಂಡು ಹೋದ. ಶ್ರೀಮಾತೆ ಅಷ್ಟು ಹೇಳಿದ ಮೇಲೂ ಅವನು ಮುಖ ಅರಳಿಸಿಕೊಂಡು ಎಂದೂ ಏನನ್ನೂ ಕೇಳಲಿಲ್ಲ. ಶ್ರೀಮಾತೆ ಸ್ವತಃ ತಮ್ಮ ಪ್ರೇರಣೆಯಿಂದಲೇ ಪ್ರತಿವರ್ಷವೂ ದುರ್ಗಾಪೂಜೆಯ ಸಮಯದಲ್ಲಿ ಕೊಡುತ್ತಿದ್ದ ಬಟ್ಟೆಯನ್ನು ಮಾತ್ರ ಅವನು ತೆಗೆದುಕೊಳ್ಳುತ್ತಿದ್ದ. ಬಹಳ ಕಾಲದ ನಂತರ ಒಂದು ಸಲ ನಾವು ಆ ಸೇವಕನನ್ನು ನೋಡಿದೆವು. ಅಷ್ಟರಲ್ಲಿ ಅವನು ಹಲವಾರು ಬಗೆಯ ಗಂಡಾಂತರಗಳಿಂದ, ಹಲವು ಬಗೆಯ ಹೊಡೆತ

ಗಳಿಂದ ಅತಿಯಾದ ದುಃಖಗಳಲ್ಲಿ ಮುಳುಗೇಳುತ್ತಿದ್ದ. ನಾವು ಅವನನ್ನು ಕಂಡಾಗ ಅವನು ನಿರಾಹಾರಿಯಾಗಿ ದಿನ ಕಳೆಯುತ್ತಿದ್ದ. ಆಗ ಶ್ರೀಮಾತೆ ಕೂಡ ದೇಹತ್ಯಾಗ ಮಾಡಿದ್ದರು. ಸ್ನೇಹಿತರೆಲ್ಲ ಅವನಿಗೆ ಹೇಳಿದರು, ''ಶ್ರೀಮಾತೆ ನಿನಗೆ ಅಷ್ಟೊಂದು ಹೇಳುತ್ತಿದ್ದಾಗ ನೀನು ಅವರಿಂದ ಏನನ್ನೂ ಬಯಸಲಿಲ್ಲ!'' ಅದಕ್ಕೆ ಅವನು ಉತ್ತರ ಕೊಟ್ಟ: ''ನಾನು ಏನಾದರೂ ಬಯಸಿದರೆ ನನಗದು ಸಿಕ್ಕೇ ಸಿಗುತ್ತದೆ — ನನಗೆ ಖಂಡಿತ ವಿಶ್ವಾಸವಿದೆ. ಆದರೆ ನಾನು ಬಯಸುವುದಿಲ್ಲ. ಮಗುವಿಗೆ ಬಾಟಲಿ ನಿಪ್ಪಲ್ ಕೊಟ್ಟು ಸುಮ್ಮನಾಗಿಸುವಂತೆ ಏನೋ ಕೊಟ್ಟು ಮರೆಸಿಬಿಡುತ್ತಾರೆ; ಅದು ನನಗೆ ಬೇಕಾಗಿಲ್ಲ.''

॥ ೧೫ ॥

**ಈ** ಕೆಳಗಿನ ಭಕ್ತ-ಶಿಷ್ಯರುಗಳನ್ನು ಶ್ರೀಮಾತೆ ಹೇಗೆ ಕರೆಯುತ್ತಿದ್ದರೋ, ಅದನ್ನು ಇಲ್ಲಿ ಬರೆದಿದೆ:

| ಹೆಸರು | ಶ್ರೀಮಾತೆ ಕರೆಯುತ್ತಿದ್ದ ಹೆಸರು |
|---|---|
| ಲಾಟು ಮಹಾರಾಜ್ | — ನಾಟು |
| ಯೋಗಿನ್ ಮಹಾರಾಜ್ | —ಛೇಲೇ ಯೋಗೇನ್ (ಹುಡುಗ ಯೋಗೇನ್) |
| ಯೋಗಿನ್ ಮಾ | — ಮೇಯೇ ಯೋಗೇನ್ (ಹುಡುಗಿ ಯೋಗಿನ್) |
| ಕೃಷ್ಣಲಾಲ್ | — ಕೇಷ್ಟನಾಲ್ |
| ಗಣೇಂದ್ರ | — ಗಣೇಶ್ |
| ಡಾ. ಕಾಂಜಿಲಾಲ್ | — ಕಾಂಜಿನಾಲ್ |
| ಲಲಿತ್ (ಲಲಿತಮೋಹನ ಚಟ್ಟೋಪಾಧ್ಯಾಯ) | — ನಲಿತ್ |
| ಗೌರೀ-ಮಾ | — ಗೌರದಾಸೀ |

॥ ೧೬ ॥

''**ಠಾ**ಕೂರ್ ದೊಡ್ಡವರೇ, ಶ್ರೀಮಾತೆ ದೊಡ್ಡವರೆ?''— ಈ ಅರ್ಥದ ಪ್ರಶ್ನೆಗೆ ಉತ್ತರವಾಗಿ ಶ್ರೀಮಾತೆ ತಮ್ಮ ಒಬ್ಬ ಶಿಷ್ಯನಿಗೆ ಹೇಳಿದರು: ''ಛಿ, ಅಂಥ ಮಾತನ್ನು ಆಡಬಹುದೆ?'' ಮರುಕ್ಷಣವೇ ಮತ್ತೆ ಕೇಳಿದರು, ''ನಿನಗೆ ಏನನ್ನಿಸುತ್ತದೆ?'' ಶಿಷ್ಯ ಹೇಳಿದ, ''ಕಾಳೀಮಾತೆ ಮಹಾದೇವನ ಮೇಲೆ ನಿಂತಿದ್ದಾಳೆ.'' ಶ್ರೀಮಾತೆ ಮೆಲುನಗೆ ನಕ್ಕು, ''ನೀನು ಆ ಭಾವನೆಯಲ್ಲೇ ಇರು'' ಎಂದರು.

॥ ೧೭ ॥

**ದ**ಕ್ಷಿಣೇಶ್ವರದಲ್ಲಿ ಸಣ್ಣ ಕೋಣೆ ನಹಬತ್‌ಖಾನೆಯಲ್ಲಿಯೇ ಬಂಧಿತರಂತೆ ಇರುತ್ತಿದ್ದ ಶ್ರೀಮಾತೆಯವರ ಒಂದು ಕಾಲಿನಲ್ಲಿ ವಾತ ಆರಂಭವಾಯಿತು. ಮುಂದೆ, ಅಂದರೆ ನಾವು ಅವರನ್ನು ಕಂಡಾಗ ಅದು ಎಷ್ಟು ಹೆಚ್ಚಾಯಿತೆಂದರೆ, ಅವರು ಆ ಕಾಲಲ್ಲಿ ಕುಂಟುತ್ತ ನಡೆಯಬೇಕಾಯಿತು. ಹಲವು ಬಗೆಯ ಡಾಕ್ಟರ್‌ಗಳು, ವೈದ್ಯರ ಚಿಕಿತ್ಸೆ ಹಾಗೂ ಮಾಲಿಷ್ ಚಿಕಿತ್ಸೆ , ಅಂತೆಯೇ ದೈವೀ ಚಿಕಿತ್ಸೆಯನ್ನು ಮಾಡಿದ್ದಾಯಿತು; ವಾಸಿಯಾಗಲಿಲ್ಲ. ಕೆಲವು ದಿನ ತುಸು ಕಡಿಮೆಯಾಗುತ್ತಿತ್ತು, ಮತ್ತೆ ಅದು ಜೋರಾಗುತ್ತಿತ್ತು. ಒಂದು ಬಾರಿಯಂತೂ ವಾತ ವಿಪರೀತ ಹೆಚ್ಚಾಯಿತು. ಅವರ ದೇಹಕ್ಕೆ ಅದರಿಂದ ತುಂಬಾ ಕಷ್ಟವಾಗುತ್ತಿದೆ ಎಂಬುದನ್ನು ಕಂಡ ಒಬ್ಬ ಶಿಷ್ಯ, ''ಅಮ್ಮಾ, ನೀವು ಅನುಮತಿ ಕೊಡಿ. ನಿಮ್ಮ ಶರೀರದಿಂದ ಈ ರೋಗವನ್ನು ನಾನು ನನ್ನ ದೇಹದ ಮೇಲೆ ಎಳೆದುಕೊಳ್ಳುತ್ತೇನೆ'' ಎಂದು ಅವರಿಗೆ ಹೇಳಿದ. ಇದನ್ನು ಹೇಳಿದೊಡನೆಯೇ ಅವನು ಹಾಗೇ ಮಾಡಲು ಆರಂಭಿಸಿದ. ಆತ ಈ ವಿದ್ಯೆಯನ್ನು ನೇಪಾಳಿ ಮಾಯಿ ಬಳಿ ಕಲಿತಿದ್ದ, ಹಾಗೂ ಅವನಿಗೆ ಹಾಗೆ ಮಾಡಲು ಸಾಧ್ಯವಿದೆ ಎಂಬುದು ಶ್ರೀಮಾತೆಗೆ ತಿಳಿದಿತ್ತು. ಆದ್ದರಿಂದ ಅವರು ಅವನಿಗೆ ಹಾಗೆ ಮಾಡಲು ಅವಕಾಶವನ್ನೇ ಕೊಡದೆ, ಅತ್ಯಂತ ವಿಚಲಿತರಾಗಿ ಅವನ ಎರಡೂ ಕೈಗಳನ್ನೂ ಹಿಡಿದುಕೊಂಡು ಹೇಳಿದರು, ''ಇಲ್ಲ, ಇಲ್ಲ ಮಗೂ, ಹಾಗೆ ಮಾಡಬೇಡ. ನಿನಗೆ ಗೊತ್ತಿಲ್ಲ. ಅದು ಈ ದೇಹಕ್ಕೆ (ತನ್ನ ದೇಹವನ್ನ ತೋರಿಸಿ) ಎಷ್ಟೊಂದು ಕಷ್ಟಕೊಡುತ್ತಿದೆಯೆಂದರೆ, ನಿನ್ನ ದೇಹ ಹೊರಟು ಹೋದರೆ ಅದರಿಂದ ಅತಿಹೆಚ್ಚು ಕಷ್ಟ ನನಗಾದೀತು – ಬಾತುಕೊಂಡ ಕಾಲಿನಲ್ಲಿ ಗುಳ್ಳೆ ಬಂದಂದಾದೀತು. ನಾನು ನಿನ್ನ ತಾಯಿ!'' ಮಹಾಶಕ್ತಿಯ ಮುಂದೆ ಸಣ್ಣ ಶಕ್ತಿ ಸೋಲಬೇಕಾಯಿತು.

॥ ೧೮ ॥

**ಹ**ಲವು ಬಾರಿ ನಾವು ಗಮನಿಸಿದ್ದೆವು, ಶ್ರೀಮಾತೆ ಸಂನ್ಯಾಸೀ ಶಿಷ್ಯಂದಿರಿಗಿಂತ ಗೃಹಸ್ಥ ಶಿಷ್ಯರನ್ನೇ ಹೆಚ್ಚು ಪ್ರೀತಿಸುತ್ತಿದ್ದರು. ಈ ರೀತಿ ಅವರು ಪಕ್ಷಪಾತ ಮಾಡುವುದಕ್ಕೆ ಕಾರಣವನ್ನು ಕೇಳಿದಾಗ ಅವರಿಂದ ಉತ್ತರ ಲಭಿಸಿತು: ''ಇವರೆಲ್ಲ(ಸಂನ್ಯಾಸಿಗಳು) ತ್ಯಾಗ ಮಾಡಿಬಂದು ಧ್ಯಾನ-ಜಪಗಳನ್ನು ಮಾಡುತ್ತಿದ್ದಾರೆ. ತಮ್ಮ ಪ್ರಯತ್ನದಿಂದಲೇ ಅವರು ಮೇಲಕ್ಕೇರುವರು. ಆದರೆ ಅವರು (ಗೃಹಸ್ಥರು) ಎಳೆಯ ಮಕ್ಕಳ ಹಾಗೆ ನನ್ನ ಮಡಿಲಲ್ಲಿ ಬಂದು ಬಿದ್ದಿದ್ದಾರೆ. ಆದ್ದರಿಂದ ಅವರನ್ನು ನಾನೇ ನೋಡಿಕೊಳ್ಳಬೇಕು.''

॥ ೧೯ ॥

**ಶ್ರೀ**ಮಾತೆಯವರ ಹೊಸ ಮನೆಯ ಹತ್ತಿರ ಚಿತ್ಪುರ ರಸ್ತೆಯಲ್ಲಿ ಒಂದು ಸಲ ಶೀತಲಾದೇವಿಯ ಸಾರ್ವಜನಿಕ ಪೂಜೆ ನಡೆಯುತ್ತಿತ್ತು. ಅಂದು ಗಂಗಾಸ್ನಾನ ಮಾಡಿದ ನಂತರ ಶ್ರೀಮಾತೆ ಎಳನೀರು, ಸಕ್ಕರೆ ಹಾಗೂ ದಕ್ಷಿಣೆಯ ನಾಣ್ಯವನ್ನು ನಮ್ಮ ಕೈಗೆ ಕೊಟ್ಟು, ''ಇವುಗಳನ್ನು ಸಾರ್ವಜನಿಕ ಪೂಜೆ ನಡೆಯುವಲ್ಲಿ ಕೊಡು. ಮನಸ್ಸಿನಲ್ಲೇ ಶೀತಲಾ ಮಾತೆಗೆ ಹೇಳು, 'ಫಲವನ್ನು ಸ್ವೀಕರಿಸು; ಫಲದ ಫಲವನ್ನು ಸ್ವೀಕರಿಸು' ಅಂತ.''

*(ಮುಂದುವರಿಯುವುದು)*